ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಏನೂ ಒಂದು ಬೇಡಿಕೆಯನ್ನು ಇಟ್ಟಿರುತ್ತಾರೆ ಅದನ್ನು ಪೂರ್ಣಗೊಳಿಸುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ. ಮಿಲ್ಕ್ ಸಪ್ಲೈ ವಿಚಾರದಲ್ಲಿ ಬೆಂಗಳೂರು ಸಿಟಿಯಲ್ಲಿ ಎಲ್ಲಿ ಸರಬರಾಜು ಆಗುತ್ತಿದೆ, ಎಲ್ಲಿ ಆಗುತ್ತಿಲ್ಲ ಎನ್ನುವ ಬಗ್ಗೆ ತೀವ್ರವಾಗಿ ಗಮನಹರಿಸುತ್ತೇನೆ. ಮತ್ತು ಚಿಕ್ಕಪೇಟೆ ಕ್ಷೇತ್ರದಲ್ಲಿ ಹೆಚ್ಚು ಬೂತ್‌ಗಳು ಬೇಕೆಂದರೆ ಮುಂದೆ ಅದನ್ನು ಪರಿಶೀಲನೆ ಮಾಡಿ ಮಂಜೂರು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ.—ತಾವು ಆವರೇಜ್ ಪಾಪ್ಯುಲೇಷನ್ ಮೇಲೆ ಹಾಲಿನ ಬೂತ್‌ಗಳನ್ನು ಓಪನ್ ಮಾಡಬೇಕು. ಇಡೀ ಅಸೆಂಬ್ಲಿ ಕ್ಷೇತ್ರದಲ್ಲಿ ಸುಮಾರು ಒಂದೂಕಾಲು ಲಕ್ಷ ಜನಸಂಖ್ಯೆ ಇರುವ ಕಡೆ ಒಂದೇ ಒಂದು ಬೂತ್‌ನ್ನು ಕೊಟ್ಟರೆ ಜನರಿಗೆ ಬಹಳ ತೊಂದರೆಯಾಗುತ್ತದೆ. ಪಾಪ್ಯುಲೇಷನ್ ಬೇಸ್ ಇಟ್ಟುಕೊಂಡು ಹಾಲು ಸರಬರಾಜು ಬೂತ್‌ಗಳನ್ನು ತೆಗೆಯಬೇಕು. ಈಗಾಗಲೇ ಬೆಂಗಳೂರು ಸಿಟಿಯಲ್ಲಿ ೮೭ ಕಾರ್ಪೊರೇಷನ್ ಡಿವಿಜನ್‌ಗಳು ಇರುತ್ತವೆ. ನಮ್ಮಲ್ಲಿ ಆರು ಕಾರ್ಪೊರೇಷನ್ ಡಿವಿಜನ್‌ಗಳಿವೆ. ಒಂದೊಂದು ಕಾರ್ಪೊರೇಷನ್ ಡಿವಿಜನ್‌ಗೂ ಒಂದೊಂದು ಬೂತ್‌ನ್ನು ಓಪನ್ ಮಾಡಿದರೆ ಅಲ್ಲಿಯ ಜನರಿಗೆ ಬಹಳ ಅನುಕೂಲವಾಗುತ್ತದೆ. ಹೀಗೆ ಮಾಡಿದರೆ ಕೆ.ಎಂ.ಎಫ್- ಹಾಲನ್ನು ಜನರು ಕೊಂಡುಕೊಳ್ಳುತ್ತಾರೆ. ಇಲ್ಲದಿದ್ದರೆ ಖಾಸಗಿ ಹಾಲು ಮಾರಾಟಗಾರರಿಂದ ಹಾಲನ್ನು ಕೊಂಡುಕೊಳ್ಳಬೇಕಾಗುತ್ತದೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಸದಸ್ಯರ ಸಲಹೆ ಬಹಳ ಸ್ವಾಗತಾರ್ಹವಾದ ಸಲಹೆಯಾಗಿರುತ್ತದೆ. ನಾನು ಇನ್ನು ಎಂಟು ದಿವಸಗಳಲ್ಲಿಯೇ ಬೆಂಗಳೂರು ಸಿಟಿಗೆ ಆವರ ಬೇಡಿಕೆಯ ಆಧಾರದಮೇಲೆ ಯಾವರೀತಿ ಬೂತ್‌ಗಳನ್ನು ಹೆಚ್ಚಿಸಬೇಕು ಎನ್ನುವ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತೇನೆಂದು ಹೇಳುತ್ತೇನೆ.

ಬಳ್ಳಾರಿ ವೈದ್ಯಕೀಯ ಮಹಾ ವಿದ್ಯಾಲಯದಲ್ಲಿ ಖಾಲಿ ಹುದ್ದೆಗಳನ್ನು ತುಂಬುವುದು

೨೧೮. ಶ್ರೀ ಎ. ರಾಮಪ್ಪ (ಬಳ್ಳಾರಿ).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಳ್ಳಾರಿ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಪ್ರಾಂಶುಪಾಲರ ಹುದ್ದೆಯು ಸುಮಾರು ಒಂದೂವರೆ ವರ್ಷದಿಂದ ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಇಲ್ಲಿಯವರೆವಿಗೂ ಪ್ರಾಂಶುಪಾಲರ ಹುದ್ದೆಯನ್ನು ಭರ್ತಿ ಮಾಡದಿರಲು ಕಾರಣವೇನು?

ಇ) ಈ ಹುದ್ದೆಯನ್ನು ಬೇಗನೆ ಭರ್ತಿ ಮಾಡಲು ಸರ್ಕಾರವು ಕ್ರಮ ತೆಗೆದುಕೊಂಡಿದೆಯೇ?

ಈ) ಬಳ್ಳಾರಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆಯಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು ಮತ್ತು ಯಾವ ದಿನಾಂಕದಿಂದ ಹುದ್ದೆಗಳು ಖಾಲಿ ಇದೆ (ವಿಭಾಗವಾರು ಸಂಖ್ಯೆಗಳನ್ನು ಒದಗಿಸುವುದು).

ಉ) ವೈದ್ಯರ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರವು ಕ್ರಮ ತೆಗೆದುಕೊಂಡಿದೆಯೇ ?

ಶ್ರೀ ಪತಿ ಮನೋರಮ ವಂಧ್ವರಾಜ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮತ್ತು ಸಹಕಾರ ಸಚಿವರು).—

ಅ) ಹೌದು

ಆ) ಹಿಂದಿನ ಪ್ರಾಂಶುಪಾಲರುದ ಡಾ. ಪಾರ್ಥಸಾರತಿಯವರು ವರ್ಗಾವಣೆ ಹೊಂದಿ ಹೋದ ನಂತರ ಇಬ್ಬರನ್ನು ಈ ಹುದ್ದೆಗೆ ನಿಯಮಿಸಿದರೂ ಹಲವಾರು ಆಡಳಿತಾತ್ಮಕ ಕಾರಣಗಳಿಂದ ಅವರು ಕೆಲಸಕ್ಕೆ ಹಾಜರಾಗಿಲ್ಲ.

ಇ) ಹೌದು

ಈ) ಒಟ್ಟು ೮೨ ಹುದ್ದೆಗಳು. ಯಾವ ದಿನಾಂಕದಿಂದ ಮತ್ತು ವಿಭಾಗವಾರು ವಿವರಗಳನ್ನು ಪ್ರತ್ಯೇಕವಾಗಿ ಮಾಹಿತಿಯನ್ನು ತಯಾರಿಸಿ ಈ ಉತ್ತರದೊಂದಿಗೆ ಲಗತ್ತಿಸಿದೆ.

ಉ) ಹೌದು

The Dates from which the Posts of Lecturers and Asst. Professors are vacant at Medical College, Bellary.

Sl. No.	Discipline	No. of lecturers posts vacant & the date from which vacant.		No. of Asst. Professors post vacant and the date from which vacant.	
1	2		3		4
1	Anatomy	14	1) 12-9-79 2) 16-1-87 3) 28-7-86 4) 15-12-83 5) 22-7-87 6) 22-7-87 7) 16-9-80 8) 17-5-80 9) 14-3-80 10) 1-1-83 11) 27-5-78 12) 24-1-89 13) 3-3-89 14) 3-3-89	1	18-11-89
2	Physiology	8	1) 1-1-81 2) 12-10-82 3) 1-1-81 4) 19-1-84 5) 84 6) 11-1-85 7) 12-2-88 8) 3-3-89		Nil
3	Biochemistry	4	1) 5-2-85 2) 18-10-85 3) 11-6-86 4) 6-6-89	1	15-5-89
4	Pharmacology	3	1) 3-6-86 2) 11-6-86 3) 4-6-89		Nil
5	Preventive & Social Medicine	3	1) 1972 2) 26-6-82 3) 15-11-88		Nil
6	Pathology	9	1) 8-2-85 2) 2-12-87 3) 10-7-87 4) 9-1-83		Nil

			5) 18-1-85 6) 20-1-84 7) 4-1-84 8) 8-11-87 9) 23-2-88			
7	Microbiology	1	1) 24-4-82		Nil	
8	Forensic Medicine	1	1) 4-4-85		Nil	
9	Medicine	2	1) 11-6-86 2) 11-6-86	3	1) 15-7-85 2) 11-6-86 3) 5-3-88	
10	Surgery	1	1) 4-3-89	3	1) 20-4-89 2) 28-11-89 3) 28-11-89	
11	O.B.G.	2	1) 24-7-80 2) 2-4-87		Nil	
12	Paediatrics	2	1) 1984		Nil	
13	Ophthalmology		Nil	1	1) 2-6-88	
14	Orthopaedics	1	1) 1-1-88	1	1) 30-11-89	
15	Skin & STD	–	nil	1	1) 18-6-88	
16	Radiology	2	1) 7-5-87 2) 7-11-89	–	nil	
17	Thorasic Surgery.	1	1) 21-11-89	–	nil	
18	Urology	1	1) 8-6-88	–	nil	
19	T.B.	–		–	nil	
20	Anaesthesiology	1	1) 13-12-89	1	1) 26-7-89	

No. of posts of porofessors are vacant at Medical College, Bellary (Department wise)

Sl. No.	Department	No. of posts	Date from which vacant
1	principal Professors	1	7-8-89
2	Physiology	1	11-6-86
3	Preventive and Social Medicine	2	15-2-82 and 30-6-89
4	Pathology	1	26-11-85
5	Forensic Medicine	1	24-7-87
6	Medicine	1	28-11-89
7	Obstetrics and Gynaecology	1	6-8-87
8	Ophthalmology	1	1-1-90
9	E.N.T.	1	30-11-89
10	Urology	1	1-4-81
11	Psychiatry	1	12-4-84
12	Thorasic Surgery	1	1-9-79
13	Dentistry	1	24-4-82
	total	14	

ಶ್ರೀ ಎಂ. ರಾಮಪ್ಪ.—ಇದರಲ್ಲಿ ಒಂದು ವಿಚಾರ ಇದೆ. ಆಲ್ಲಿಗೆ ಒಹಳ ಮಂದಿ ಪ್ರೊಫೆಸರ್‌ಗಳನ್ನು ಪೋಸ್ಟ್ ಮಾಡುತ್ತಾರೆ. ಆದರೆ ಅವರು ಬಂದು ಒಂದೆರಡು ತಿಂಗಳು ಇದ್ದು ರಜಾ ಹಾಕಿ ಸಂಪಾದನೆಗಾಗಿ ಹೊರಗಡೆ ಹೋಗುತ್ತಾರೆ. ಮತ್ತೆ ಕೆಲವರು ಗೈರು ಹಾಜರಾಗುತ್ತಾರೆ. ಪುನಃ ವಾಪಸ್ಸು ಬರುತ್ತಾರೆ. ಬಂದಮೇಲೆ ಪ್ರೊಮೋಷನ್ಸ್ ಬರುತ್ತದೆ. ಇಂತಹವರ ಬಗ್ಗೆ ನೀವು ಏನೂ ಕ್ರಮ ತೆಗೆದುಕೊಳ್ಳುತ್ತಿಲ್ಲ. ಲಾಸ್ ಆಫ್ ಪೇ ಮಾಡುತ್ತಾರೆ ಅಷ್ಟೆ. ಅವರು ಹೊರಗಡೆ ಹೋಗಿ ರೊಕ್ಕ ದುಡಿದುಕೊಂಡು ಬಂದಿರುತ್ತಾರೆ. ಇಂತಹವರಿಗೆ ಒಂದೆರಡು ಇನ್‌ಕ್ರಿಮೆಂಟ್‌ಗಳನ್ನು ಕಟ್ ಮಾಡಿದರೆ ಅವರಿಗೇನೂ ಆನ್ನಿಸುವುದಿಲ್ಲ. ಇದರಿಂದ ಅವರಿಗ ಆರ್ಥ ಲಾಸ್ ಏನು ಆಗುವುದಿಲ್ಲ. ೩-೪ ತಿಂಗಳು ಬಾರದಿದ್ದವರ ಮೇಲೆ ಸ್ಟ್ರಾಕ್ಟ್ ಕ್ರಮ ತೆಗೆದುಕೊಳ್ಳುವುದು ಅಂದರೆ ಡಿಸ್‌ಮಿಸ್ ಮಾಡಬೇಕು ಅಥವಾ ಸಸ್ಪೆಂಡ್ ಮಾಡಬೇಕು. ಅನ್‌ಆಥರೈಸ್ಡ್ ಆಬ್ಸೆಂಟ್ ಆದವರಿಗೆ ಏತಕ್ಕೆ ಅವಕಾಶ ಕೊಡುತ್ತೀರಿ ಎಂದು ಕೇಳುತ್ತೇನೆ. ಹೀಗಾದರೆ ಕಾಲೇಜಿನ ಪರಿಸ್ಥಿತಿ ಬಹಳ ಗಂಭೀರವಾಗುತ್ತದೆ. ರವಿಚಂದ್ರ ಎಂಬ ಪ್ರೊಫೆಸರ್ ಅವರು ಹೋಗಿದ್ದಾರೆ, ಶಹಜಾನ್ ಎಂಬುವವರು ಹೋಗಿದ್ದಾರೆ. ಈ ರೀತಿ ಬಹಳ ಮಂದಿ ಅನ್‌ಆಥರೈಸ್ಡ್ ಆಬ್ಸೆಂಟ್ ಆಗುತ್ತಾರೆ. ಇಂಥವರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀಮತಿ ಮನೋರಮಾ ಮಧ್ವರಾಜ್.—ಈಗ ಶಿಸ್ತಿನ ಪ್ರಕರಣಗಳು ೩೪೧ ಇವೆ. ಇವರ ಬಗ್ಗೆ ಖಂಡಿತ ಕ್ರಮ ತೆಗೆದುಕೊಂಡು ಮಾನ್ಯ ಸದಸ್ಯರಿಗೆ ಏನು ಕ್ರಮ ತೆಗೆದುಕೊಂಡಿದ್ದೇವೆಂಬುದನ್ನು ತಿಳಿಸುತ್ತೇನೆ.

ಶ್ರೀ ಎಂ. ರಾಮಪ್ಪ —ಪ್ರೊಫೆಸರ್ ಆಗಿದ್ದವರಿಗೆ ಕಡಿಮೆ ಪನಿಷ್‌ಮೆಂಟ್ ಮಾಡುತ್ತೀರಿ. ವೈದ್ಯರು ಎಂದು ಕಡಿಮೆ ಪನಿಷ್‌ಮೆಂಟ್ ಕೊಟ್ಟರೆ ತಪ್ಪಾಗುತ್ತದೆ. ಅವರು ದೊಡ್ಡ ಸಂಬಳದವರು ಎಂದು ದೊಡ್ಡ ತಪ್ಪು ಮಾಡಿದರೂ ಬಿಟ್ಟು ಬಿಡುತ್ತೀರಿ. ಅವರ ಬಗ್ಗೆ ತಾವು ಸೀರಿಯಸ್ ಆಗಿ ಕ್ರಮ ತೆಗೆದುಕೊಳ್ಳುತ್ತಿಲ್ಲವೆಂದು ಹೇಳುತ್ತೇನೆ.

(ಉತ್ತರವಿಲ್ಲ)

ಡಾ॥ ಎಲ್. ಮುಲಕ ರೆಡ್ಡಿ.—ಬಳ್ಳಾರಿ ಮೆಡಿಕಲ್ ಕಾಲೇಜ್ ಆಸ್ಪತ್ರೆಯನ್ನು ಬೇರೆ ಆಸ್ಪತ್ರೆಗಳಂತೆ ಪರಿಗಣಿಸುವುದಕ್ಕೆ ಬರುವುದಿಲ್ಲ. ಮೆಡಿಕಲ್ ಕಾಲೇಜ್ ಆಸ್ಪತ್ರೆಯಲ್ಲಿ ಕೆಲಸ ಮಾಡುವವರಂ ರೋಗಿಗಳ ಶುಶ್ರೂಷೆ ಮಾಡುವುದಲ್ಲದೆ ಹೊಸ ವೈದ್ಯರಿಗೆ ತರಬೇತಿಯನ್ನು ಕೂಡ ಕೊಡಬೇಕಾಗುತ್ತದೆ ಅಲ್ಲಿ ಒಟ್ಟು ವೈದ್ಯ ಉಪನ್ಯಾಸಕರ ಸಂಖ್ಯೆ ೧೪೦ ಇರುತ್ತದೆ. ಆದರಲ್ಲಿ ೮೨ ಹುದ್ದೆಗಳು ಖಾಲಿ ಇವೆ. ಅವು ಸುಮಾರು ೪-೬ ವರ್ಷಗಳಿಂದ ಖಾಲಿ ಇವೆ. ಸಚಿವರು ನಿದ್ದೆ ಮಾಡುತ್ತಿದ್ದಾರೆಯೆ ? ನಿರ್ದೇಶಕರು ನಿದ್ದೆ ಮಾಡುತ್ತಿದ್ದಾರೆಯೆ ಎಂದು ಕೇಳುತ್ತೇನೆ. ಆಸ್ಪತ್ರೆಯಲ್ಲಿ ವೈದ್ಯರಿಲ್ಲದಿದ್ದರೆ ಜನರ ಆರೋಗ್ಯ ಹೇಗೆ ಸಂರಕ್ಷಣೆಯಾಗುತ್ತದೆ ? ಇದಕ್ಕೆ ಸರ್ಕಾರ ಏನು ವ್ಯವಸ್ಥೆ ಮಾಡಿದೆ ?

ಶ್ರೀಮತಿ ಮನೋರಮಾ ವೀಧ್ವರಾಜ್ —೧೯೮೨ರ ಲೋಕಸೇವಾ ಆಯೋಗದ ನೇಮಕಾತಿ ನಿಯಮಾವಳಿ ವಿರುದ್ಧ ಕೆಲವರು ಕರ್ನಾಟಕದ ಶ್ರೇಷ್ಠ ನ್ಯಾಯಾಲಯಕ್ಕೆ ಹೋಗಿದ್ದರು. ಆಲ್ಲಿ ಸರ್ಕಾರ ತನ್ನ ಕೇಸನ್ನು ಕಳೆದುಕೊಂಡಿದೆ. ಈಗ ಆದು ಉಚ್ಚ ನ್ಯಾಯಾಲಯದಲ್ಲಿರುವುದರಿಂದ ನಾವು ಅದನ್ನು ತೆರವು ಮಾಡಿಸುವುದಕ್ಕೆ ಸೂಕ್ತ ಕ್ರಮ ಕೈಗೊಳ್ಳುತ್ತಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಸುಪ್ರೀಂ ಕೋರ್ಟಿನಲ್ಲಿರತಕ್ಕ ಕೇಸಿಗೂ ಇದಕ್ಕೂ ಏನೂ ಸಂಬಂಧವಿಲ್ಲ. ರಾಜ್ಯದಲ್ಲಿನ ಒಟ್ಟು ೩೫೦ ಜನ ವೈದ್ಯಾಧಿಕಾರಿಗಳು ಹೊರ ದೇಶದಲ್ಲಿ ಕೆಲಸ ಮಾಡುತ್ತಿದ್ದಾರೆ. ಬಳ್ಳಾರಿ ಕಾಲೇಜಿನ ವೈದ್ಯಾಧಿಕಾರಿಗಳು ಕೂಡ ಬೇರೆ ಬೇರೆ ದೇಶಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರನ್ನು ಈಗಾಗಲೇ ಕೆಲಸದಿಂದ ತೆಗೆದುಹಾಕಬೇಕಾಗಿತ್ತು. ಇವತ್ತಿನ ದಿವಸ ಅನೇಕ ಜಿಲ್ಲಾ ಕೇಂದ್ರಗಳಲ್ಲಿರತಕ್ಕ ಆಸ್ಪತ್ರೆಗಳಲ್ಲಿ ವೈದ್ಯಾಧಿಕಾರಿಗಳು ಇಲ್ಲ. ಆದರಲ್ಲಿ ಬಳ್ಳಾರಿ, ಶಿವಮೊಗ್ಗ, ದಕ್ಷಿಣ ಕನ್ನಡ ಎಲ್ಲಾ ಸೇರಿವೆ. ಈ ರೀತಿ ಹೊರಗಡೆ ಹೋಗಿ ಕೆಲಸ ಮಾಡುತ್ತಿರುವ ವೈದ್ಯಾಧಿಕಾರಿಗಳನ್ನು ತಕ್ಷಣ ಸಸ್ಪೆಂಡ್ ಮಾಡಿ ಆ ಹುದ್ದೆಗಳಿಗೆ ಬೇರೆ ವೈದ್ಯರನ್ನು ನೇಮಿಸಿಕೊಳ್ಳಬೇಕು. ಕಳೆದ ಐದಾರು ವರ್ಷಗಳಿಂದ ಇದು ಕಾಮನ್ ಕೇಸ್ ಆಗಿದೆ. ಇಲಾಖೆಯ ಕಾರ್ಯದರ್ಶಿಗಳು ಹಾಗೂ ಡೈರಕ್ಟರೇಟ್ ಆಫೀಸ್‌ನವರೆಲ್ಲ ನಿದ್ದೆ ಮಾಡುತ್ತಿದ್ದಾರೆ. ದಯವಿಟ್ಟು ಅವರಿಗೆಲ್ಲಾ ಸರಿಯಾದ ಚಿಕಿತ್ಸೆ ಕೊಡುತ್ತೀರೋ ಇಲ್ಲವೋ ? ಈ ಬಗ್ಗೆ ನನಗೆ ನಿರ್ದಿಷ್ಟವಾದ ಉತ್ತರ ಬೇಕು.

ಶ್ರೀಮತಿ ಮನೋರಮಾ ವೀಧ್ವರಾಜ್.—ಮಾನ್ಯ ಸಭಾಧ್ಯಕ್ಷರೆ, ಈ ಪ್ರಕರಣ ಸರ್ವೋಚ್ಚ ನ್ಯಾಯಾಲಯದಲ್ಲಿರುವುದರಿಂದ ನಮ್ಮ ಲೋಕಸೇವಾ ಆಯೋಗದವರು ನಮ್ಮ ಇಲಾಖೆಯಿಂದ ಯಾವುದೇ ಪಟ್ಟಿಗಳನ್ನು ಲೆಕ್ಚರರ್ ಪೋಸ್ಟಿಗೆ ಬಿಡುಗಡೆ ಮಾಡಿದರೂ ಅವರು ಸೆಲೆಕ್ಟ್ ಮಾಡುವುದಕ್ಕೆ ತಯಾರಿಲ್ಲ.

ಡಾ॥ ಎಲ್. ಮಲಕರೆಡ್ಡಿ.—ನಾನು ಒಪ್ಪುತ್ತೇನೆ. ಅಸಿಸ್ಟೆಂಟ್ ಪ್ರೊಫೆಸರ್ಸ್ ಪೋಸ್ಟ್‌ಸ ೧೨, ಹಾಗೂ ಪ್ರೊಫೆಸರ್ಸ್ ಪೋಸ್ಟ್‌ಸ ೧೪ ಖಾಲಿ ಇದೆ ಎಂದು ಹೇಳಿದ್ದಾರೆ. ಅಲ್ಲಿ ಸ್ನಾತಕೋತ್ತರ ವ್ಯಾಸಂಗ ಕೂಡ ನಡೆಯುತ್ತದೆ. ಪ್ರೊಫೆಸರ್‌ಗಳಿಲ್ಲದೆ ಯಾವರೀತಿ ವಿದ್ಯಾಭ್ಯಾಸ ಇಲ್ಲಿ ನಡೆಯುತ್ತದೆ ? ಅದಕ್ಕೆ ತಕ್ಷಣ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ ?

ಶ್ರೀಮತಿ ಮನೋರಮಾ ವೀಧ್ವರಾಜ್.—ತಕ್ಷಣ ಕ್ರಮ ತೆಗೆದುಕೊಳ್ಳುತ್ತೇವೆ.

ಬೀದರ್ ಜಿಲ್ಲೆಯಲ್ಲಿ ಕಬ್ಬು ಅರೆಯುವುದು.

೨೫೮ (ಎ)) ಡಾ॥ ವಿಜಯಕುಮಾರ್ ಖಂಡ್ರೆ (ಭಾಲ್ಕಿ).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮತ್ತು ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೀದರ್ ಜಿಲ್ಲೆಯಲ್ಲಿ ಕಬ್ಬು ಬೆಳೆಯುವ ಕ್ಷೇತ್ರದ ಒಟ್ಟು ವಿಸ್ತೀರ್ಣ (ದಯವಿಟ್ಟು ತಾಲ್ಲೂಕುವಾರ್ ಅಂಕಿ ಅಂಶಗಳನ್ನು ನೀಡುವುದು).